ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಲೈನ್‌ಮನ್ ದಿನಗೂಲಿ ಆಧಾರದ ಮೇಲೆ ಬೆಸ್ಕಾಂ ಕಛೇರಿಯಿಂದ ತೆಗೆದುಕೊಂಡಿದ್ದಾರೆ. ಆತನು ಲೈನ್ ಅನ್ನು ಸರಿಮಾಡುವ ದೃಷ್ಟಿಯಿಂದ ಕಂಬಕ್ಕೆ ಹತ್ತಿ ಹೆಚ್ಚು ಕಡಿಮೆ ಆಗಿದೆ. ಇದಕ್ಕೆ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ. ಸರ್ಕಾರದಲ್ಲಿ ಕೆಲವೊಂದು procedureಗಳು ಇವೆ. ಅವರು ನಮ್ಮ employee ಅಲ್ಲ. ಅವನನ್ನು contract basis ನಲ್ಲಿ ತೆಗೆದುಕೊಂಡು ಕೆಲಸವನ್ನು ಮಾಡುತ್ತಿದ್ದಾರೆ. ಯಾವುದೋ ಏಜೆನ್ಸಿಯವರು ಕೆಲಸ ಮಾಡಿಸಿದ್ದಾರೆ. ಇನ್ನೊಂದು, ಇಲ್ಲಿ ಮಾನವೀಯತೆಯ ಪ್ರಶ್ನೆ ಇದೆ. ಈಗಾಗಲೇ ಒಂದು ಲಕ್ಷ ರೂಪಾಯಿಗಳ ಪರಿಹಾರದ ಹಣವನ್ನು ಏಜೆನ್ಸಿ ಮುಖಾಂತರವಾಗಿ ಕೊಟ್ಟಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:– ಇದು ಹೇಗೆ ಆಗುತ್ತದೆ?

ಶ್ರೀ ಕೆ.ಎಸ್. ಮಂಜುನಾಥಗೌಡ:– ನಮ್ಮ ತಪ್ಪನ್ನು ಇಟ್ಟುಕೊಂಡು ನಾವು ದುಡ್ಡನ್ನು ಕೊಡಲಿಲ್ಲವೆಂದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಆ ವ್ಯಕ್ತಿ contract basis ಮೇಲೆ ಕೆಲಸ ಮಾಡುತ್ತಿದ್ದ. Contract basis ಮೇಲೆ ಕೆಲಸ ಮಾಡಬೇಕಾದರೆ ಲೈನ್ ಮೇಲೆ ಹತ್ತಿಸಲೇಬೇಕಾಗುತ್ತದೆ, ಮತ್ತೊಂದನ್ನು ಮಾಡಲೇಬೇಕಾಗುತ್ತದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಈಗಾಗಲೇ ಏಜೆನ್ಸಿ ಮುಖಾಂತರ ಒಂದು ಲಕ್ಷ ಪರಿಹಾರವನ್ನು ಕೊಡಿಸಿದ್ದೇವೆ. ತಾವು ಈ ಬಗ್ಗೆ ನಮ್ಮ ಗಮನ ಸೆಳೆದಿದ್ದೀರಿ. ಈ ಬಗ್ಗೆ ನಾವು ಸಹಾನುಭೂತಿಯಿಂದ ನೋಡಿ ಮತ್ತೆ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಇನ್ನೂ ಸ್ವಲ್ಪ ಸಹಾಯ ಮಾಡುವುದಕ್ಕೆ ಖಂಡಿತ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು:– ಆಯಿತು. ಶ್ರೀ ಸಿ.ಟಿ. ರವಿ ಮತ್ತು ಶ್ರೀ ಡಿ.ಎನ್. ಜೀವರಾಜ್‌ರವರೆ, ತಾವು ಗಮನಸೆಳೆಯಿರಿ.

5. ವಿಷಯ: ಗುತ್ತಿಗೆದಾರರ ಬಿಲ್‌ಗಳು ಪಾವತಿಯಾಗದೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಹಾಗೂ ಹಾಸ ಜಿಲ್ಲೆಗಳ ಲೋಕೋಪಯೋಗಿ ಇಲಾಖೆಯ ವಿಭಾಗ ವ್ಯಾಪ್ತಿಯಲ್ಲಿ ಖಜಾನೆ ಇ.ಪಿ.ಎಫ್. ಕೋಡ್ ಬದಲಾವಣೆಯಿಂದ ಇಲಾಖೆಯ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಬಿಲ್‌ಗಳು ಪಾವತಿಯಾಗದೆ ತೊಂದರೆಯುಂಟಾಗಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ,

ಹಾಸನ ಮತ್ತು ಚಿಕ್ಕಮಗಳೂರು ಲೋಇ ವಿಭಾಗಗಳಲ್ಲಿ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರಿಂದ ಕಾರ್ಮಿಕರ ಭವಿಷ್ಯ ನಿಧಿಗೆ ಜಮೆ ಮಾಡಬೇಕಾಗಿರುವ ವಂತಿಗೆ ಮೊತ್ತ ಕ್ರಮವಾಗಿ ` 6.86 ಲಕ್ಷಗಳು ಮತ್ತು ` 10.14 ಲಕ್ಷಗಳನ್ನು ಪಾವತಿಸುವಂತೆ ಪ್ರಾದೇಶಿಕ ಕಾರ್ಮಿಕ ಭವಿಷ್ಯ ನಿಧಿ ಆಯುಕ್ತರು ಚಿಕ್ಕಮಗಳೂರು ರವರು ಹೊರಡಿಸಿರುವ ದಿನಾಂಕ: 02/05/2013 ಆದೇಶದಲ್ಲಿ ಸೂಚಿಸಲಾಗಿದೆ.

ಈ ಪ್ರಕರಣದ ಕುರಿತು ಕಾನೂನು ಇಲಾಖೆಯ ಸಲಹೆಯನ್ನು ಪಡೆಯಲಾಯಿತು. ಕಾನೂನು ಇಲಾಖೆಯ ಅಭಿಪ್ರಾಯವು "ನಿಗದಿತ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯು ಗುತ್ತಿಗೆದಾರರಿಗೆ ಟೆಂಡರ್ ಮೂಲಕ ನಿರ್ವಹಣೆ ಮಾಡಲು ಷರತ್ತು ಮತ್ತು ನಿಬಂದನೆಗಳಿಗನುಸಾರವಾಗಿ ವಹಿಸುವುದರಿಂದ ಹಾಗೂ ಲೋಕೋಪಯೋಗಿ ಇಲಾಖೆಯು Factory ಅಥವಾ establishment ಎಂಬ ಪದದ ವ್ಯಾಪ್ತಿಗೆ ಒಳಪಡದೇ ಇರುವುದರಂದ The Employees Provident Funds Manual and Miscellaneous Provisions Act, 1952ರ ಕಲಂಗಳಿಗೆ

ಲೋಕೋಪಯೀಗಿ ಇಲಾಖೆಗೆ ಅನ್ವಯವಾಗುವುದಿಲ್ಲ. ಕಾರ್ಮಿಕರು ಮತ್ತು ಲೋಕೋಪಯೋಗಿ ಇಲಾಖೆಯ ಮಧ್ಯೆ ಕಾಮಗಾರಿಗೆ ಸಂಭಂದಿಸಿದಂತೆ ಅಥವಾ ಹಣ ಪಾವತಿಗೆ ಸಂಬಂದಿಸಿದಂತೆ ನೇರ ಸಂಪರ್ಕ ಇರುವುದಿಲ್ಲ, ಗುತ್ತಿಗೆದಾರರೇ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದರಿಂದ ಸಂಬಳ ಹಾಗೂ ಇತರೆ ಸೌಲಭ್ಯಗಳನ್ನು ಗುತ್ತಿಗೆದಾರರೆ ಪಾವತಿ ಮಾಡಬೇಕಾಗಿರುವುದರಿಂದ ಪ್ರಾದೇಶಿಕ ಆಯುಕ್ತರು ನೀಡಿರುವ ಆದೇಶದಂತೆ ಭವಿಷ್ಯ ನಿಧಿ ವಂತಿಕೆಯ ಶೇಕಡವಾರು ಪ್ರಮಾಣವನ್ನು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ರವರು ಪಾವತಿ ಮಾಡುವುದು ಕಾನೂನಿನ್ವಯ ಸೂಕ್ತವಾಗುವುದಿಲ್ಲ" ಎಂಬುದಾಗಿ ತಿಳಿಸಿ ಈ ಸಂಬಂಧವಾಗಿ ಪ್ರಾಧೇಶಿಕ ಕಾರ್ಮಿಕ ಭವಿಷ್ಯ ನಿಧಿ ಆಯುಕ್ತರು, ಚಿಕ್ಕಮಗಳೂರು, ರವರ ಆದೇಶದ ವಿರುದ್ಧ ರೀಜಿನಲ್ ಪ್ರಾವಿಂಡಡ್ ಫಂಡ್ ಕಮೀಷನರ್, ಇವರ ಮುಂದೆ ರಿವ್ಯೂ ಪಿಟಿಷನ್ ಸಲ್ಲಿಸಲು ಹಾಗೂ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಅನ್ನು ದಾಖಲಿಸಲಾಗಿತ್ತು. ಸದರಿ ರಿಟ್ ಪಿಟಿಷನ್ ಸಂಖ್ಯೆ: 2593/2014 (ಎಲ್)ನ್ನು ದಿನಾಂಕ 06/02/2014 ರಂದು ವಿಚಾರಣೆ ನಡೆಸಿ ಘನ ನ್ಯಾಯಾಲಯವು ಮೇಲ್ಮನವಿಯನ್ನು ಕಾರ್ಮಿಕ ಭವಿಷ್ಯ ನಿಧಿ ಮೇಲ್ಮನವಿ ಪ್ರಾಧಿಕಾರ ನವದೆಹಲಿ ಇವರಿಗೆ ಸಲ್ಲಿಸುವಂತೆ ನಿರ್ದೇಶನ ನೀಡಿ ರಿಟ್ ವಜಾಗೊಳಿಸಿ ಆದೇಶಿಸಿರುತ್ತದೆ.

ಪ್ರಾದೇಶಿಕ ಕಾರ್ಮಿಕ ಭವಿಷ್ಯ ನಿಧಿ ಆಯುಕ್ತರು ಚಿಕ್ಕಮಗಳೂರು ರವರು ದಿನಾಂಕ: 21/02/2014ರ ಪತ್ರದಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲಾ ಖಜಾನಾಧಿಕಾರಿಗಳಿಗೆ ಲೋಕೋಪಯೋಗಿ ಇಲಾಖಾ ವಿಭಾಗಗಳಿಂದ ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡಲು ನಿರ್ಬಂಧಿಸಲಾಗಿತ್ತು. ನಂತರ ದಿನಾಂಕ: 28/03/2014ರ ಪತ್ರದಲ್ಲಿ ನಿರ್ಬಂಧನೆ ಆದೇಶವನ್ನು ತೆರವುಗೊಳಿಸಿ ಪುನಃ ದಿ:07/04/2014 ರಂದು ಮತ್ತೊಮ್ಮೆ ಲೋಕೋಪಯೋಗಿ ಇಲಾಖೆಯ ಯಾವುದೇ ಬಿಲ್ಲುಗಳನ್ನು ಮಾನ್ಯ ಮಾಡದಿರುವಂತೆ ಜಿಲ್ಲಾ ಖಜಾನಾಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಕಾರ್ಮಿಕ ಭವಿಷ್ಯ ನಿಧಿ ಮೇಲ್ಮನವಿ ಪ್ರಾಧಿಕಾರ ನವದೆಹಲಿ ಇಲ್ಲಿ ಮೇಲ್ಮನವಿ ಸಂಖ್ಯೆ ATA. 256(06) ಮತ್ತು ATA. 257(06)ನು ದಿನಾಂಕ: 24/03/2014ರಲ್ಲಿ ದಾಖಲಿಸಲಾಗಿತ್ತು. ಸದರಿ ಪ್ರಕರಣಗಳು ದಿನಾಂಕ 9/4/2014ರಂದು ವಿಚಾರಣೆ ನಡೆದು ಕಾರ್ಮಿಕ ಭವಿಷ್ಯ ನಿಧಿ ಮೇಲ್ಮನವಿ ಪ್ರಾಧಿಕಾರವು ಪ್ರಾದೇಶಿಕ ಕಾರ್ಮಿಕ ಭವಿಷ್ಯ ನಿಧಿ ಆಯುಕ್ತರು ಚಿಕ್ಕಮಗಳೂರು ರವರು ಆದೇಶಿಸಿರುವ ಮೊತ್ತದ ಶೇಕಡ 50% ರಷ್ಟು ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸಲು ಆದೇಶಿಸಲಾಗಿರುತ್ತದೆ.

ಸರ್ಕಾರದ ನಿಧಿಯನ್ನು ಬ್ಯಾಂಕ್‌ಗಳಲ್ಲಿ ಇಡಲು ಅವಕಾಶವಿಲ್ಲದಿರುವುದರಿಂದ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸಲು ಸಾಧ್ಯವಿಲ್ಲದ ಕಾರಣ ಬ್ಯಾಂಕ್ ಗ್ಯಾರಂಟಿಯನ್ನು ಇಡಬೇಕಾಗಿದ್ದ ` 8,50,04,361/– ಗಳ ಮೊತ್ತಕ್ಕೆ ಆರ್ಥಿಕ ಇಲಾಖೆ ಇವರು 'Implicit Guarantee' ಪತ್ರವನ್ನು ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ PWD 236 FC2 2014, ದಿನಾಂಕ: 30/05/2014ರಲ್ಲಿ ಪ್ರಾದೇಶಿಕ ಕಾರ್ಮಿಕ ಭವಿಷ್ಯ ನಿಧಿ ಆಯುಕ್ತರು ಚಿಕ್ಕಮಗಳೂರು ರವರಿಗೆ ನೀಡಿರುತ್ತಾರೆ.

ಆದರೆ ಸದರಿ 'Implicit Guarantee' ಪತ್ರವನ್ನು ಮಾನ್ಯ ಮಾಡಲು ಸಾಧ್ಯವಿಲ್ಲವೆಂದು ಹಾಗೂ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಸಲ್ಲಿಸಲು ಸಾದ್ಯವಾಗದಿದ್ದಲ್ಲಿ ತಿಳಿಸಿರುವ ಮೊತ್ತ ` 8,50,04,361.00 ಗಳನ್ನು ಠೇವಣಿ ಮಾಡುವಂತೆ ತಿಳಿಸಿ ಅವಶ್ಯವಿದ್ದಲ್ಲಿ ಆದೇಶದ ಮಾರ್ಪಾಡಿಗೆ ಸಂಬಂಧಿಸಿದಂತೆ ಕಾರ್ಮಿಕ ಭವಿಷ್ಯ ನಿಧಿ ಮೇಲ್ಮನವಿ ಪ್ರಾಧಿಕಾರವನ್ನು ಸಂಪರ್ಕಿಸಲು ಮಾನ್ಯ ಪ್ರಾದೇಶಿಕ ಆಯುಕ್ತರು ಚಿಕ್ಕಮಗಳೂರು ಇವರು ಪತ್ರ ಸಂಖ್ಯೆ KN/CKR/SRO/RCY/2014/203 ದಿನಾಂಕ: 13/06/2014ರಲ್ಲಿ ತಿಳಿಸಿರುತ್ತಾರೆ.

ಈ ನಿಟ್ಟಿನಲ್ಲಿ STANDING COUNCIL FOR STATE OF KARNATAKA SUPREME COURT OF INDIA NEW DEHLI ಇವರಿಗೂ ಸಹಾ ದಿನಾಂಕ: 21/06/2014 ರಂದು ಪತ್ರ ಬರೆದು 'Implicit

Guarantee' ಪತ್ರವನ್ನು ಮಾನ್ಯ ಮಾಡಿ ಅಂಗೀಕರಿಸುವಂತೆ ಕಾರ್ಮಿಕ ಭವಿಷ್ಯ ನಿಧಿ ಮೇಲ್ಮನವಿ ಪ್ರಾಧಿಕಾರ ನವ ದೆಹಲಿಯ ಮುಂದೆ ಮಧ್ಯಂತರ ಅರ್ಜಿ ಸಲ್ಲಿಸಿ ಇಲಾಖೆಯ ಹಿತ ದೃಷ್ಟಿಯಿಂದ ಈಗಾಗಲೇ ಹೊರಡಿಸಿರುವ ಆದೇಶವನ್ನು ಮಾರ್ಪಡಿಸಿ ಕೊಡಲು ಕೋರಿದ್ದು ಇಲಾಖೆಯು ಲೋಕೋಪಯೋಗಿ ಇಲಾಖೆಯ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಬಿಲ್ಲುಗಳು ಪಾವತಿಯಾಗಲು ಮೇಲಿನ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಸಿ.ಟಿ. ರವಿ:– ಮಾನ್ಯ ಸಚಿವರು ಈ ಬಗ್ಗೆ ವಿವರವಾಗಿ ಉತ್ತರ ಕೊಟ್ಟಿದ್ದಾರೆ. ನಮಗೆ ಪರಿಹಾರ, ನಮಗೆ ಬಿಲ್ ಪಾಸ್ ಆಗುವಂತೆ ಆಗಬೇಕು. ಇವರ ಪ್ರಯತ್ನದ ಬಗ್ಗೆ ನಮಗೆ ಏನು ಅಪನಂಬಿಕೆ ಇಲ್ಲ. ಕೇವಲ ಎರಡು ಜಿಲ್ಲೆಗಳಿಗೆ ಮಾತ್ರ ಇಪಿಎಫ್ ಅಪ್ಲೈ ಮಾಡಿದ್ದಾರೆ. ಅದು illegal ಆಗಿ ಮಾಡಿದ್ದಾರೆ. ಈ ಲೋಕೋಪಯೋಗಿ pre-tender qualification ಏನೂ ಇಲ್ಲ. ಅವರು bank guarantee ಕೊಡುತ್ತಾರೋ, ಡೆಪಾಸಿಟ್ ಇಡುತ್ತಾರೋ ಏನೂ ಮಾಡುತ್ತಾರೋ ಗೊತ್ತಿಲ್ಲ. ಬಿಲ್ ಪಾಸ್ ಮಾಡಲಿ.

(ಗೊಂದಲ)

ಅಧ್ಯಕ್ಷರು:– ಈ ರೀತಿ ಆದರೆ ಆಗುವುದಿಲ್ಲ, ನಾನು ಹೇಳಿಬಿಡುತ್ತೇನೆ. No. ಆಗುವುದಿಲ್ಲ, ಅವರು ಏನು ಕೇಳಿದ್ದಾರೋ ಅದಕ್ಕೆ ಅವರು ಉತ್ತರ ಹೇಳುತ್ತಾರೆ. ಉತ್ತರ ಹೇಳ.

ಶ್ರೀ ವೈ.ಎಸ್.ವಿ. ದತ್ತಾ:– ನಾನು ಕೂಡ ಲೋಕೋಪಯೋಗಿ ಸಚಿವರ ಹತ್ತಿರ ಮನವಿ ಮಾಡುತ್ತೇನೆ. ನಾವು ಮೂರು ಜನ ಸೇರಿ ಸಹಿ ಹಾಕಿ ಕೊಟ್ಟಿದ್ದೇವೆ.

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದನ್ನು ವೈಯಕ್ತಿಕವಾಗಿ ನನ್ನ ಗಮನಕ್ಕೆ ತಂದಿದ್ದಾರೆ. ನಾನು ಹಾಸನದಲ್ಲಿ ನಡೆದ ನಮ್ಮ ಇಲಾಖೆಯ

review meeting ನಲ್ಲಿಯೂ ಕೂಡ ವಿವರವಾದ ವರದಿಯನ್ನು ಪಡೆದಿದ್ದೇನೆ. ಕಾರ್ಮಿಕರ ಭೂವಿಷ್ಯನಿಧಿಗೆ ಕಂಟ್ರ್ಯಾಕ್ಟ್‌ದಾರರು, ಗುತ್ತಿಗೆದಾರರಿಗೆ ಕೊಡಬೇಕಾದಂಥ ಹಣ deposit ಮಾಡುವುದಕ್ಕೆ ಸಂಬಂಧಪಟ್ಟಿದ್ದು. ಇದು Government of India ದ auditor ಅಲ್ಲಿ random ಆಗಿ ವಿಸಿಟ್ ಮಾಡಿದಾಗ ಇವರು ಹಾಕಿಲ್ಲವೆಂದು ತಿಳಿದು ಬಂದ ಮೇಲೆ ಅವರು ಇಲ್ಲಿನ ಟ್ರೆಜರಿಗೆ ಬರೆದು ಇದನ್ನು ಕೊಡಬೇಡಿ ಎಂದು ಹೇಳಿದ್ದಾರೆ. ನಾವು ಹಣಕಾಸು ಇಲಾಖೆಯಿಂದ ಗ್ಯಾರಂಟಿ ಕೊಡುತ್ತೇವೆ ಅದನ್ನು ಕೊಡಿ ಎಂದರೂ ಕೂಡ ಮತ್ತೆ ಕೋರ್ಟ್‌ಗೆ ಹೋದೆವು ಅಲ್ಲಿಯೂ ಕೊಡದೆ ಮತ್ತೆ ಕೋರ್ಟ್ Appellate Council ಗೆ ಹೋಗಬೇಕೆಂದು ಹೇಳಿ ನಮಗೆ ಹೇಳಿದ್ದಾರೆ. ಪುನಃ ನಾವು ಕೋರ್ಟಿಗೆ ಹೋಗಿ ಅದನ್ನು ತೆರವು ಮಾಡಿಸಿದೆವು. ನಾವೇ at least 50% ಹಣವನ್ನು ಕಟ್ಟಿದರೂ ಸಹ ಅವರು ಆಮೇಲೆ ಅದನ್ನು reimburse ಮಾಡುತ್ತಾರೆ. ಆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದು ನಮ್ಮಿಂದಾಗಿರುವ ಅನಾನುಕೂಲವಲ್ಲ. Random ಆಗಿ ಇನ್ನು Government of India ಏನು ಮಾಡಿದೆ, Government ವತಿಯಿಂದ ಇವರಿಗೆ ಅನಾನುಕೂಲ ತಪ್ಪಿಸಬೇಕೆಂದು ಹೇಳಿ we are trying to sort it out. ಅದನ್ನು ಮಾನ್ಯ ಸದಸ್ಯರಿಗೂ ಹೇಳಿದ್ದೇನೆ ಮತ್ತು ವೈಯಕ್ತಿಕವಾಗಿ ನಮ್ಮ ಇಲಾಖಾಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ಹಣಕಾಸು ಇಲಾಖೆಯಿಂದ ಅವರಿಗೆ 50% ನಾವೇ ಕಟ್ಟಿ ಆಮೇಲೆ ಆ ಹಣವನ್ನು recovery ಮಾಡಿಕೊಳ್ಳುವುದಾಗಲಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಹಾಗಾಗಿ ಈ ವಿಷಯದಲ್ಲಿ ಸರ್ಕಾರ ಯಾವುದೇ ರೀತಿಯ ತತ್ಸಾರ ಮಾಡುತ್ತಿಲ್ಲ. We are trying to resolve the issue.

ಶ್ರೀ ವೈ.ಎಸ್.ವಿ. ದತ್ತ:– ಖಂಡಿತ ನೀವು ಪ್ರಯತ್ನ ಮಾಡಿದ್ದೀರಿ.

ಶ್ರೀ ಸಿ.ಟಿ. ರವಿ:– ಇದನ್ನು monitor ಮಾಡುವುದಕ್ಕೆ ಯಾರಾದರೂ ಒಬ್ಬರನ್ನು depute ಮಾಡಿ.

ಶ್ರೀ ವೈ.ಎಸ್.ವಿ. ದತ್ತಾ:– Implicit guarantee ಬೇಗ ದೆಹಲಿಯಲ್ಲಿ ಅಪ್ರೂವ್ ಆಗುವ ಹಾಗೆ follow up ಮಾಡಲಿಕ್ಕೆ ಒಬ್ಬರನ್ನು depute ಮಾಡಿ.

ಶ್ರೀ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಈಗ ತಾವೇನು ಹೇಳಿದಿರಿ ಆ ಎಲ್ಲಾ efforts ಅನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಸಿ.ಟಿ. ರವಿ:– Ad hoc ಆಗಿ release ಮಾಡಿ. ಆಮೇಲೆ bank guarantee case ಮುಂದುವರೆಸಲಿ. ಇಲ್ಲದೆ ಹೋದರೆ ಅವರು ಸತ್ತುಹೋಗುತ್ತಾರೆ.

ಅಧ್ಯಕ್ಷರು:– ಆಯಿತು.

6. ವಿಷಯ: ಕೆ–ಶಿಪ್ ಯೋಜನೆಯಡಿ ಬೀರೂರಿನಿಂದ ದಾವಣಗೆರೆಯವರೆಗಿನ ರಸ್ತೆಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಇದುವರೆವಿಗೂ ಕಾಮಗಾರಿ ಪ್ರಾರಂಭವಾಗದೆ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಜಿ.ಹೆಚ್. ಶ್ರೀನಿವಾಸ್ (ತರೀಕೆರೆ):– ಕೆ–ಶಿಪ್ ಯೋಜನೆಯಡಿ ಬೀರೂರಿನಿಂದ ದಾವಣಗೆರೆಯವರೆಗಿನ ರಸ್ತೆಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಇದುವರೆವಿಗೂ ಕಾಮಗಾರಿ ಪ್ರಾರಂಭವಾಗಿಲ್ಲ. ಈಗಾಗಲೇ 2.00 ಕೋಟಿ ರೂಪಾಯಿಗಳ ಕೆಲಸವನ್ನು ನಾವು 115 ಕಿ.ಮೀ. ಗೆ ರಿಪೇರಿ ಮಾಡಲಿಕ್ಕೆ ಹೇಳಿದ್ದಾರೆ. ಅದು ಯಾವುದಕ್ಕೂ ಸಾಕಾಗುತ್ತಿಲ್ಲ. ಅವರು 5.00 ಕೋಟಿ ರೂಪಾಯಿಗಳಿಗೆ ಮಾತ್ರ sanction ಮಾಡಿ ಎಂದು ಮಿನಿಮಮ್ ಎಸ್ಟಿಮೇಟ್ ಕಳುಹಿಸಿದ್ದಾರೆ. ದಯಮಾಡಿ ರಿಪೇರಿ ಮಾಡಲಿಕ್ಕೆ 5.00 ಕೋಟಿ ರೂಪಾಯಿಗಳನ್ನು sanction ಮಾಡಬೇಕೆಂದು ಹೇಳಿ ಸಚಿವರ ಗಮನ ಸೆಳೆಯಲಿಕ್ಕೆ ಇಚ್ಛಿಸುತ್ತೇನೆ.

ಅಧ್ಯಕ್ಷರು:– ಸಚಿವರು ಇದಕ್ಕೆ ಆಗಲೇ ಹೇಳಿದ್ದಾರೆ. ಅದೇ ವಿಷಯವಿರಬೇಕು.